# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 95(32) |
| ಮಾನ್ಯ ಸದಸ್ಯರ ಹೆಸರು | : | ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 13.02.2023 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ನಕಲಿ ವೈದ್ಯರು ಚಿಕಿತ್ಸೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು. |
| ಆ) | ಕರ್ನಾಟಕ ಆಯುರ್ವೇದಿಕ್ ಮತ್ತು ಯುನಾನಿ ವೈದ್ಯ ಮಂಡಳಿ (ಕೆ.ಎ.ಯು.ಪಿ) ಅಧಿಕಾರಿಗಳು ಭ್ರಷ್ಟಾಚಾರ ಮಾಡಿ ಅರ್ಹತೆ ಇಲ್ಲದ ವೈದ್ಯರಿಗೆ ವೈದ್ಯವೃತ್ತಿ ನಡೆಸಲು ಪ್ರಮಾಣ ಪತ್ರ ನೀಡಿರುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | 1991 ರಿಂದ 2007 ರವರೆಗೂ ಈ ಮಂಡಳಿಯಲ್ಲಿ 117 ನಕಲಿ ವೈದ್ಯ ವಿದ್ವಾನರಿಗೆ ಹಿಂದಿನ ನೋಂದಣಾಧಿಕಾರಿಗಳು ಡಾ॥ ಹನುಮೇಗೌಡ ಇವರು ನೋಂದಣಿ ನೀಡಿರುವ ಬಗ್ಗೆ ಇವರ ವಿರುದ್ಧ ಸರ್ಕಾರದ ಆದೇಶ ಸಂಖ್ಯೆ:ಆಕುಕ/239/ಪಿಐಎಂ/2007, ದಿನಾಂಕ:22/11/2007ರಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 7(2ಎ) ಅಡಿಯಲ್ಲಿ ವಿರುದ್ಧ ತನಿಖೆ ನಡೆಸಲು ಲೋಕಾಯುಕ್ತರವರಿಗೆ ಪ್ರಕರಣವನ್ನು ವಹಿಸಲಾಗಿದೆ.<br><br>ಸದರಿ 117 ವೈದ್ಯ ವಿದ್ವಾನರ ವಿರುದ್ಧ ಉಪ್ಪಾರ್ ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ಸಂಖ್ಯೆ:87/2008 ರಲ್ಲಿ ದೂರು ದಾಖಲಿಸಲಾಗಿರುತ್ತದೆ. ನಂತರ ದಿನಾಂಕ:28/02/2008 ರಲ್ಲಿ ಎಲ್ಲಾ 117 ವೈದ್ಯ ವಿದ್ವಾನ್ ವೈದ್ಯರ ನೋಂದಣಿಯನ್ನು ರದ್ದುಪಡಿಸಿ ಆದೇಶ ಹೊರಡಿಸಲಾಗಿರುತ್ತದೆ.<br><br>ನೋಂದಣಿ ರದ್ದುಗೊಳಿಸಿರುವ ಆದೇಶದ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಪ್ರತಿವಾದಿಗಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ರಾಜ್ಯ ಉಚ್ಚ ನ್ಯಾಯಾಲಯವು ದಿನಾಂಕ:04/10/2010 ರಂದು ರಿಟ್ ಅರ್ಜಿ ಸಂಖ್ಯೆ:31670-72 ಮತ್ತು 31739-802/2010 ರಲ್ಲಿ ಎಫ್ಐಆರ್ ಸಂಖ್ಯೆ:87/2008ನ್ನು ರದ್ದುಗೊಳಿಸಿ ಆದೇಶ ನೀಡಿರುತ್ತದೆ. ಮಂಡಳಿಯು ಎಲ್ಲಾ 117 ವೈದ್ಯ ವಿದ್ವಾನರುಗಳಿಗೆ ನೋಟಿಸ್ ನೀಡಿ ಅವರ ನೋಂದಣಿಯನ್ನು ರದ್ದುಗೊಳಿಸಲಾಗಿರುತ್ತದೆ. ರದ್ದುಗೊಂಡ ವೈದ್ಯ ವಿದ್ವಾನ್ ವೈದ್ಯರುಗಳು ಸದರಿ ಆದೇಶದ ವಿರುದ್ಧ ರಿಟ್ ಪಿಟಿಷಿಯನ್ ಸಂಖ್ಯೆ: 50673/2013 ರಲ್ಲಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ತದನಂತರ ದಿನಾಂಕ:17/12/2020 ರಂದು |

| | | |
|---|---|---|
| | | ಅಂತಿಮ ತೀರ್ಪು ನೀಡಿ ಪ್ರತಿವಾದಿಗಳಿಗೆ ರಾಜ್ಯ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಸೂಚಿಸಿ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ. ಪ್ರತಿವಾದಿಗಳು ರಾಜ್ಯ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸದೇ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಅಪೀಲ್ 148/2021 ಸಲ್ಲಿಸಿರುತ್ತಾರೆ. ರಾಜ್ಯ ಉಚ್ಚ ನ್ಯಾಯಾಲಯವು ದಿನಾಂಕ:29/03/2022 ರಲ್ಲಿ ಅಂತಿಮ ಆದೇಶ ನೀಡಿದ್ದು, ಮತ್ತೊಮ್ಮೆ ರಾಜ್ಯ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಸೂಚಿಸಿ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಈ ಸಂಬಂಧ ದೈನಂದಿನ ಪತ್ರಿಕೆಯಾದ ಕನ್ನಡ ಪ್ರಭದಲ್ಲಿ ದಿನಾಂಕ;11/06/2021 ರಂದು 117 ನಕಲಿ ವೈದ್ಯ ವಿದ್ವಾನ್‌ರ ನೋಂದಣಿಯನ್ನು ರದ್ದುಗೊಳಿಸಿರುವ ಬಗ್ಗೆ ರಾಜ್ಯಾದ್ಯಂತ ಪ್ರಕಟಿಸಲಾಗಿದೆ; ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಪತ್ರ ವ್ಯವಹರಿಸಿ ಸದರಿ 117 ವೈದ್ಯ ವಿದ್ವಾನ್‌ರ ಕೆ.ಪಿ.ಎಂ.ಇ ಪರವಾನಿಗೆಯನ್ನು ರದ್ದುಪಡಿಸಲು ದಿನಾಂಕ:15/05/2021 ರಂದು ಪತ್ರ ಬರೆಯಲಾಗಿದೆ ಹಾಗೂ ಜಿಲ್ಲಾ ಆಯುಷ್ ಅಧಿಕಾರಿಗಳಿಗೂ ಸಹ ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.<br><br>2017-18ನೇ ಸಾಲಿನಲ್ಲಿ ಈ ಮಂಡಳಿಯಲ್ಲಿ ನೋಂದಣಿಗೊಳ್ಳದ 11 ಜನ ಅನರ್ಹರಿಗೆ ಕೆ.ಪಿ.ಎಂ.ಇ ಅಡಿಯಲ್ಲಿ ಪರವಾನಿಗೆ ನೀಡಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಅಂದಿನ ನೋಂದಣಾಧಿಕಾರಿಯಾದ ಡಾ॥ ವಿನಾಯಕ್ ಅಂಬರ್‌ಕರ್ ಸುಭಾಷ್‌ರವರ ವಿರುದ್ಧ ಇಲಾಖಾ ವಿಚಾರಣೆಯು ಪ್ರಗತಿಯಲ್ಲಿರುತ್ತದೆ. ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ಪತ್ರ ಬರೆದು ಸದರಿ 11 ಜನ ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿದೆ.<br><br>2019-20ನೇ ಸಾಲಿನಲ್ಲಿ ನೋಂದಣಿಗೊಳ್ಳದ 13 ಜನ ಅನರ್ಹರಿಗೆ ಕೆ.ಪಿ.ಎಂ.ಇ ಅಡಿಯಲ್ಲಿ ಪರವಾನಿಗೆ ನೀಡಲು ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಇನ್ನೂ ಇಬ್ಬರು (2) ಅನರ್ಹ ವೈದ್ಯರುಗಳಿಗೆ ಬಯೋಮೆಟ್ರಿಕ್ ನೋಂದಣಿ ನೀಡಿರುವ ಹಿನ್ನಲೆಯಲ್ಲಿ ಅಂದಿನ ನೋಂದಣಾಧಿಕಾರಿಯಾದ ಡಾ॥ ವೆಂಕಟರಾಮಯ್ಯ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಪರಿಶೀಲನೆಯಲ್ಲಿರುತ್ತದೆ. ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ಪತ್ರ ಬರೆದು ಸದರಿ 13 ಜನ ನಕಲಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿದೆ. |
| ಇ) | ರಾಜ್ಯದ ಪ್ರತಿ ಜಿಲ್ಲೆಯಲ್ಲಿ ನಕಲಿ ವೈದ್ಯರು ಚಿಕಿತ್ಸೆ ನೀಡುತ್ತಿದ್ದು, ಇವರ ವಿರುದ್ಧ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ; (ಸರ್ಕಾರದ ಆದೇಶದ ಪ್ರತಿ ನೀಡುವುದು) | 1. ಸರ್ಕಾರವು ಆದೇಶ ಸಂಖ್ಯೆ:215/ಪಿಐಎಂ.2007, ದಿನಾಂಕ:13-12-2007 ರಲ್ಲಿ ನೋಂದಣಾಧಿಕಾರಿಗಳು, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ, ಬೆಂಗಳೂರು ಹಾಗೂ ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು ಇವರುಗಳಿಗೆ ನಕಲಿ ವೈದ್ಯರನ್ನು ಪತ್ತೆ ಹಚ್ಚಲು ಅಧಿಕಾರ ನೀಡಿ ಆದೇಶಿಸಿದೆ. |

| | | |
|---|---|---|
| | | 2.ಸರ್ಕಾರದ ಸುತ್ತೋಲೆ ಸಂಖ್ಯೆ:137/ಪಿಐಎಂ.2013, ದಿನಾಂಕ:07-05-2013ರಲ್ಲಿ ನಕಲಿ ವೈದ್ಯರನ್ನು ನಿಗ್ರಹ ಮಾಡುವ ಉದ್ದೇಶದಿಂದ ಜಿಲ್ಲಾವಾರು ಕಾರ್ಯಪಡೆ (ಟಾಸ್ಕ್ ಫೋರ್ಸ್) ರಚಿಸಿದೆ.<br>3. ನಕಲಿ ವೈದ್ಯರನ್ನು ಪತ್ತೆ ಹಚ್ಚಿ ಅವರ ವಿರುದ್ದ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಆಕುಕ325/ಪಿ.ಐ.ಎಂ/2017 ದಿನಾಂಕ:29-09-2017ರಲ್ಲಿ ಜಿಲ್ಲಾ ಮಟ್ಟದ ವಿಶೇಷ ಪಡೆಯನ್ನು ರಚಿಸಿದೆ. |
| ಈ) | ನಕಲಿ ವೈದ್ಯರು ನಡೆಸುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ಮರಣ ಹೊಂದಿರುವ ಜನ ಸಾಮಾನ್ಯರು ಎಷ್ಟು?(ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

**ಸಂಖ್ಯೆ: ಆಕುಕ 59 ಪಿಐಎಂ 2023**

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು